# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 593
ಸದಸ್ಯರ ಹೆಸರು : ಶ್ರೀ ಶರವಣ ಟಿ.ಎ.
ಉತ್ತರಿಸುವ ಸಚಿವರು : ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವರು
ಉತ್ತರಿಸುವ ದಿನಾಂಕ : 23.12.2022

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ರಾಜ್ಯದಲ್ಲಿ ಕಳೆದ ಎರಡು ವರ್ಷಗಳಲ್ಲಿ ಆರ್ಥಿಕ ನಷ್ಟ ಇದ್ದರೂ ಸಹ ಕೆ.ಎಸ್.ಆರ್.ಟಿ.ಸಿ ಮತ್ತು ಬಿ.ಎಂ.ಟಿ.ಸಿ ವ್ಯಾಪ್ತಿಯಲ್ಲಿ ಎಷ್ಟು ಬಸ್‌ಗಳನ್ನು ಖರೀದಿಸಲಾಗಿದೆ. ಇದಕ್ಕೆ ಬೇಕಾದ ಹಣವನ್ನು ಯಾವ ಮೂಲಗಳಿಂದ ಹೊಂದಾಣಿಕೆ ಮಾಡಲಾಗಿದೆ; | ಕ.ರಾ.ರ.ಸಾ.ನಿಗಮವು 2020-21 ಹಾಗೂ 2021-22ನೇ ಸಾಲಿನಲ್ಲಿ ಯಾವುದೇ ಹೊಸ ವಾಹನಗಳನ್ನು ಖರೀದಿಸಿರುವುದಿಲ್ಲ.<br><br>ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯು 2020-21ನೇ ಸಾಲಿನಲ್ಲಿ ಯಾವುದೇ ಹೊಸ ವಾಹನಗಳನ್ನು ಖರೀದಿಸಿರುವುದಿಲ್ಲ. 2021-22ನೇ ಸಾಲಿನಲ್ಲಿ 565 (ಬಿ.ಎಸ್-6) ವಾಹನಗಳನ್ನು ರೂ.19341.45 ಲಕ್ಷಗಳಲ್ಲಿ ಖರೀದಿಸಲಾಗಿದ್ದು, ಸರ್ಕಾರದ ಸಾಲ ಮೇಲುಸ್ತುವಾರಿಯಡಿ ಮೆ:ಕೆ.ಯು.ಐ.ಡಿ.ಎಫ್.ಸಿ. ಸಂಸ್ಥೆಯಿಂದ ಸಾಲವನ್ನು ಪಡೆದು ಖರೀದಿಸಲಾಗಿದೆ. ಸದರಿ ಸಾಲದ ಕಂತುಗಳ ಮರುಪಾವತಿಗೆ ಸರ್ಕಾರದಿಂದ ಆಯವ್ಯಯದಲ್ಲಿ ಅನುದಾನ ಕಲ್ಪಿಸಲಾಗುತ್ತಿದೆ. |
| ಆ | ಕೆ.ಎಸ್.ಆರ್.ಟಿ.ಸಿ ಮತ್ತು ಬಿ.ಎಂ.ಟಿ.ಸಿ ವ್ಯಾಪ್ತಿಯಲ್ಲಿನ ಒಟ್ಟಾರೆ ಆರ್ಥಿಕ ವಹಿವಾಟು, ಲಾಭ ಮತ್ತು ನಷ್ಟದ ಪ್ರಮಾಣ ಎಷ್ಟು: (ಸಂಪೂರ್ಣ ವಿವರ ನೀಡುವುದು) | 2021-22ನೇ ಸಾಲಿನ ಒಟ್ಟಾರೆ ಆರ್ಥಿಕ ವಹಿವಾಟು, ಲಾಭ ಮತ್ತು ನಷ್ಟದ ಪ್ರಮಾಣ ಕೆಳಕಂಡಂತಿದೆ:<br><br>**ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ**<br><br>1. ಒಟ್ಟು ಆದಾಯ: ರೂ. 2,859.09 ಕೋಟಿ<br>2. ಒಟ್ಟು ವೆಚ್ಚ : ರೂ. 3,282.40 ಕೋಟಿ<br>3. ನಿವ್ವಳ ನಷ್ಟ : ರೂ. 423.31 ಕೋಟಿ<br><br>**ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ**<br><br>1. ಒಟ್ಟು ಆದಾಯ : ರೂ. 2115.12 ಕೋಟಿ<br>2. ವೆಚ್ಚ : ರೂ. 2293.36ಕೋಟಿ |



Generated from eOffice by B SREERAMULU, TD-MIN(BS), TRANSPORT MINISTER, Trans on 20/12/2022 02:24 PM

| | | |
|---|---|---|
| | | 3. ನಿವ್ವಳ ನಷ್ಟ : ರೂ. 178.24 ಕೋಟಿ |
| ಇ | ಸಾರಿಗೆ ಇಲಾಖೆಯಲ್ಲಿನ ಭ್ರಷ್ಟಾಚಾರ ಮತ್ತು ಹಣ ಸೋರಿಕೆಯನ್ನು ತಡೆಗಟ್ಟಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?<br>(ವಿವರ ನೀಡುವುದು) | ಸಾರಿಗೆ ಮತ್ತು ರಸ್ತೆ ಸುರಕ್ಷತೆ ಇಲಾಖೆಯಲ್ಲಿ ಸಾರ್ವಜನಿಕರ ಕೆಲಸಗಳಿಗೆ ಅನುಕೂಲವಾಗುವಂತೆ ಸಹಾಯಕ ಮೇಜು/ ಮಾಹಿತಿ ಕೇಂದ್ರವನ್ನು ತೆರೆಯಲಾಗಿದ್ದು, ಅಗತ್ಯವಾದ ಎಲ್ಲಾ ನಮೂನೆಗಳನ್ನು ಒದಗಿಸುವುದರ ಜೊತೆಗೆ ಸೂಕ್ತ ಮಾರ್ಗದರ್ಶನ ನೀಡುವ ಮೂಲಕ ಅವಶ್ಯ ಮಾಹಿತಿಗಳನ್ನು ಒದಗಿಸಲಾಗುತ್ತಿದೆ. 'ಸಕಾಲ' ಸೇವೆಯಡಿಯಲ್ಲಿ ನಿಗದಿಪಡಿಸಿರುವ ಕಾಲಮಿತಿಯಲ್ಲಿ ಕೆಲಸಗಳನ್ನು ಮಾಡಿಕೊಡಲಾಗುತ್ತಿದೆ. ಸಾರ್ವಜನಿಕರು ಮಧ್ಯವರ್ತಿಗಳನ್ನು ಸಂಪರ್ಕಿಸದೇ ನೇರವಾಗಿ ಕಛೇರಿ ಸಿಬ್ಬಂದಿ/ ಅಧಿಕಾರಿಯವರನ್ನು ಭೇಟಿ ಮಾಡಿ ಅವರ ಕೆಲಸಗಳನ್ನು ಮಾಡಿಸಿಕೊಳ್ಳಬೇಕೆಂದು ಕಛೇರಿ ಆವರಣದಲ್ಲಿ ಸೂಚನಾ ಫಲಕವನ್ನು ಹಾಕಲಾಗಿದೆ.<br><br>ಅಲ್ಲದೆ, ದಿನಾಂಕ: 01-11-2021ರಿಂದ ಸಾರಿಗೆ ಇಲಾಖೆಯಲ್ಲಿನ ಮೂವತ್ತು ಸೇವೆಗಳನ್ನು ಆನ್‌ಲೈನ್ ಮೂಲಕ ಸಂಪರ್ಕರಹಿತ ಸೇವೆಗಳಾಗಿ ನಿರ್ವಹಿಸಲು ಅನುಷ್ಠಾನಗೊಳಿಸಲಾಗಿದ್ದು, ಈ ಸೇವೆಗಳಿಗೆ ಸಂಬಂಧಿಸಿದಂತೆ, ಸಾರ್ವಜನಿಕರು ಕಚೇರಿಗೆ ಹಾಜರಾಗುವ ಅವಶ್ಯಕತೆ ಇರುವುದಿಲ್ಲ.<br><br>ಸಾರಿಗೆ ಸಂಸ್ಥೆಗಳ ಯಾವುದೇ ಸಿಬ್ಬಂದಿ/ಅಧಿಕಾರಿಗಳು ಭ್ರಷ್ಟಾಚಾರದಲ್ಲಿ ತೊಡಗಿರುವ ಬಗ್ಗೆ ಖಚಿತವಾದ ಮಾಹಿತಿ/ದೂರುಗಳು ಬಂದಲ್ಲಿ ಸಂಸ್ಥೆಯಲ್ಲಿನ ನಿಯಮಾನುಸಾರ ತನಿಖೆ ಕೈಗೊಂಡು ಕ್ರಮ ಕೈಗೊಳ್ಳಲಾಗುತ್ತಿದೆ.<br><br>ನಿಗಮದ ಯಾವುದೇ ಸಿಬ್ಬಂದಿ/ಅಧಿಕಾರಿಗಳು ಭ್ರಷ್ಟಾಚಾರ ಮತ್ತು ಹಣ ಸೋರಿಕೆ ಪ್ರಕರಣಗಳಲ್ಲಿ ಭಾಗಿಯಾಗಿರುವ ಬಗ್ಗೆ ಸಲ್ಲಿಸಲಾದ ವರದಿಗಳ ಕುರಿತು ಕ.ರಾ.ರ.ಸಾ.ಸಂಸ್ಥೆ ನೌಕರರ (ನಡತೆ ಮತ್ತು ಶಿಸ್ತು) ನಿಯಮಾವಳಿ, 1971ರನ್ವಯ ಶಿಸ್ತಿನ ಕ್ರಮ ಕೈಗೊಳ್ಳಲಾಗುತ್ತಿದೆ.<br><br>ಸಾರಿಗೆ ಆದಾಯ ಸೋರಿಕೆ ತಡೆಗಟ್ಟಲು |



Generated from eOffice by B SREERAMULU, TD-MIN(BS), TRANSPORT MINISTER, Trans on 20/12/2022 02:24 PM

9?7520

| | | |
|---|---|---|
| | | ಮಾರ್ಗದ ಮೇಲೆ ನಿರ್ವಾಹಕರನ್ನು ಅನಿರೀಕ್ಷಿತವಾಗಿ ಹಾಗೂ ಆಗಿಂದ್ದಾಗೆ ತನಿಖೆಗೆ ಒಳಪಡಿಸಿ, ನ್ಯೂನ್ಯತೆ ಎಸಗಿದ ಸಿಬ್ಬಂದಿಗಳ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳುವುದು ಜಾರಿಯಲ್ಲಿದೆ.<br><br>ಅಲ್ಲದೆ, ಎಲ್ಲಾ ವಿಭಾಗಗಳ ಹಾಗೂ ಕೇಂದ್ರ ಕಛೇರಿ ಒಳಗೊಂಡಂತೆ ತನಿಖಾ ತಂಡಗಳ ಮೂಲಕ ಪ್ರತಿನಿತ್ಯ ಬಸ್ಸುಗಳನ್ನು ತಪಾಸಣೆಗೆ ಒಳಪಡಿಸಲಾಗುತ್ತಿದೆ. ಬಸ್ಸುಗಳಲ್ಲಿ ಟಿಕೇಟು ರಹಿತವಾಗಿ ಪ್ರಯಾಣಿಸುವ ಪ್ರಯಾಣಿಕರಿಗೆ ದಂಡ ವಿಧಿಸಲಾಗುತ್ತಿದೆ ಹಾಗೂ ಪ್ರಯಾಣಿಕರಿಗೆ ಟಿಕೆಟ್ ವಿತರಿಸದೇ ಲೋಪವೆಸಗುವ ನಿರ್ವಾಹಕರಿಗೆ ನಿಯಮಾವಳಿಗಳ ಅನುಸಾರ ಸೂಕ್ತ ಶಿಸ್ತು ಕ್ರಮ ಕೈಗೊಳ್ಳಲಾಗುತ್ತಿದೆ. |

ಸಂಖ್ಯೆ: ಟಿಡಿ 284 ಟಿಸಿಕ್ಯೂ 2022

(ಬಿ. ಶ್ರೀರಾಮುಲು)
ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ
ಕಲ್ಯಾಣ ಸಚಿವರು



erated from eOffice by B SREERAMULU, TD-MIN(BS), TRANSPORT MINISTER, Trans on 20/12/2022 02:24 PM